**ಕರ್ನಾಟಕ ಸರ್ಕಾರ**

**(ಸಿ.ಆರ್.ಪಿ.67)**

| |
|---|
| **ಹೇಳಿಕೆ ಹಾಳೆ** |
| **(ಆರ್.ಪಿ.ಸಂಖ್ಯೆ 57)** |
| **ನಮೂನೆ ಸಂಖ್ಯೆ 4** |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ :: 140/2015**

ಪ್ರಾಸಾ-12 ಚಾಸಾ- 14

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಕಿರಣ್ ಎನ್ |
| ತಂದೆಯ ಹೆಸರುಃ | ಃ | ಹೆಚ್.ಎ.ನಾಗೇಶ್ ರಾವ್ |
| ವಯಸ್ಸುಃ | ಃ | 44 ವರ್ಷ |
| ಉದ್ಯೋಗಃ | ಃ | ಡೆಪ್ಯುಟಿ ವೈಸ್ ಪ್ರೆಸಿಡೆಂಟ್,<br>ಹೆಚ್.ಡಿ.ಎಫ್.ಸಿ. ಬ್ಯಾಂಕ್,<br>ಬೆಂಗಳೂರು |
| ವಾಸಃ | ಃ | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 09-03-2023ಃ**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

1. ನಾನು ಜನವರಿ 2013 ರಿಂದ ಏಪ್ರಿಲ್ 2014 ರ ತನಕ ಆ್ಯಕ್ಸಿಸ್ ಬ್ಯಾಂಕ್ ಹಾಸನ ಶಾಖೆಯಲ್ಲಿ ಸೀನಿಯರ್ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಹಾಸನ ಲೋಕಾಯುಕ್ತ ಪೊಲೀಸರು ಆರೋಪಿ ಮಂಜುನಾಥನ ಪತ್ನಿ ಪದ್ಮಾವತಿಗೆ ಸಂಬಂಧಪಟ್ಟ ಬ್ಯಾಂಕ್ ಸ್ಟೇಟ್ ಮೆಂಟ್ ದಾಖಲೆಯನ್ನುಕೋರಿ ದಿನಾಂಕ 25.11.2013 ರ ಪತ್ರದಂತೆ ಕೇಳಿದ್ದು, ಸದರಿ ಪತ್ರ ನಮಗೆ ದಿನಾಂಕ 26.11.2013 ರಂದು ಬಂದಿರುತ್ತದೆ. ಈಗ ತೋರಿಸಿದ ದಾಖಲೆಯು ಸದರಿ ಕೋರಿಕೆ ಪತ್ರ ಆಗಿದ್ದು ಅದನ್ನು ಸ್ವೀಕರಿಸಿದ ಬಗ್ಗೆ ಅದರಲ್ಲಿ ನಮ್ಮ ಬ್ಯಾಂಕಿನ ಮೊಹರು ಇರುತ್ತದೆ. ಸದರಿ ಪತ್ರವನ್ನು ನಿಶಾನೆ.ಪಿ.87

ಎಂದು ಮತ್ತು ಅದನ್ನು ನಮ್ಮ ಬ್ಯಾಂಕಿನಲ್ಲಿ ಸ್ವೀಕರಿಸಿದ ಬಗ್ಗೆ ಅದರಲ್ಲಿರುವ ಬ್ಯಾಂಕಿನ ಮೊಹರನ್ನು ದಿನಾಂಕದ ಜೊತೆಯಲ್ಲಿ ನಿಶಾನೆ.ಪಿ.87(ಎ) ಎಂದು ಗುರುತಿಸಲಾಗಿದೆ. ಸದರಿ ಕೋರಿಕೆ ಮೇರೆಗೆ ನಾನು ಅದೇ ದಿನ ದಿನಾಂಕ 26-11-2013 ರಂದು ಆರೋಪಿಯ ಪತ್ನಿ ಪದ್ಮಾವತಿಗೆ ಸಂಬಂಧಪಟ್ಟ ಬ್ಯಾಂಕ್ ಖಾತೆಯ ಅಕೌಂಟ್ ಸ್ಟೇಟ್ ಮೆಂಟ್ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಸದರಿ ಅಕೌಂಟ್ ಸ್ಟೇಟ್ಮೆಂಟ್ ನೀಡಿರುವ ಬಗ್ಗೆ ಪತ್ರವಾಗಿದ್ದು, ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪತ್ರವನ್ನು ನಿಶಾನೆ.ಪಿ.88 ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ.ಪಿ.88(ಎ) ಎಂದು ಗುರುತಿಸಲಾಗಿದೆ. ಈಗ ತೋರಿಸಿದ ದಾಖಲೆಯು ನಾನು ತನಿಖಾಧಿಕಾರಿಗೆ ನೀಡಿದ ಆರೋಪಿ ಪತ್ನಿಗೆ ಸಂಬಂಧಪಟ್ಟ ಬ್ಯಾಂಕ್ ಅಕೌಂಟ್ ಎಕ್ಸ್ಟ್ರ್ಯಾಕ್ಟ್ ದಾಖಲೆಯಾಗಿರುತ್ತದೆ. ಸದರಿ ದಾಖಲೆಯನ್ನು ನಿಶಾನೆ.ಪಿ.89 ಎಂದು ಮತ್ತು ಸದರಿ ದಾಖಲೆಯನ್ನು ದೃಢೀಕರಿಸಿದ ಬಗ್ಗೆ ಸದರಿ ದಾಖಲೆಯ ಪ್ರತಿ ಪುಟಗಳಲ್ಲಿ ನನ್ನ ಸಹಿ ಇದ್ದು ಸದರಿ ದಾಖಲೆಯ ಕೊನೆ ಪುಟದಲ್ಲಿರುವ ನನ್ನ ಸಹಿಯನ್ನು ನಿಶಾನೆ.ಪಿ.89(ಎ) ಎಂದು ಗುರುತಿಸಲಾಗಿದೆ. ಆರೋಪಿಯ ಪದ್ಮಾವತಿಯರ ಈ ಮೇಲೆ ಹೇಳಿದ ಖಾತೆಯಲ್ಲಿ ಅವರಿಗೆ ಬಡ್ಡಿಯ ಹಣ ಎಷ್ಟು ಬಂದಿದೆ ಎಂಬ ಬಗ್ಗೆ ನಿಶಾನೆ.ಪಿ.89 ರ ದಾಖಲೆಯಲ್ಲಿ ನಮೂದು ಇರುತ್ತದೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಸಿ.ಎನ್.ವಿ. ವಕೀಲರಿಂದಃ-**

3. ಲೋಕಾಯುಕ್ತ ಪೊಲೀಸರು ನನ್ನಲ್ಲಿ ನಿಶಾನೆ.ಪಿ.89 ರಂತೆ ಬ್ಯಾಂಕ್ ಸ್ಟೇಟ್ ಮೆಂಟ್ ದಾಖಲೆಯನ್ನು ಕೇಳಿಲ್ಲ ಮತ್ತು ನಾನು ಲೋಕಾಯುಕ್ತ ಪೊಲೀಸರಿಗೆ ಆರೋಪಿಯ ಪತ್ನಿ ಪದ್ಮಾವತಿಗೆ ಸಂಬಂಧಪಟ್ಟ ನಿಖರವಾದ ಬ್ಯಾಂಕ್ ಸ್ಟೇಟ್ ಮೆಂಟ್ ದಾಖಲೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**

**ಸ್ಪೆಷಲ್ ನ್ಯಾಯಾಧೀಶರು, ಹಾಸನ.**